ಮೇಲ್ಮನವಿದಾರರ ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಮೇಮೋ ಮತ್ತು ಒಂದು ದಾಖಲೆಯನ್ನು ಸಲ್ಲಿಸಿರುತ್ತಾರೆ.

ಮಧ್ಯಂತರ ಅರ್ಜಿ-1 ರ ಮೇಲೆ ಆದೇಶ

ಮೇಲ್ಮನವಿದಾರರಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಭಾರತಿಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.415 ರ ಅಡಿಯಲ್ಲಿ ಮೇಲ್ಮನವಿ ಸಲ್ಲಿಸಿ, 2 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ದಾವಣಗೆರೆ ರವರು ದಿನಾಂಕ.08-09-2025 ರಂದು ಸಿಸಿ.3205/2023 ರಲ್ಲಿ ನೀಡಿದ ತೀರ್ಪನ್ನು ರದ್ದುಪಡಿಸಬೇಕೆಂದು ಮೇಲ್ಮನವಿ ಸಲ್ಲಿಸಿರುತ್ತಾರೆ.

ಮೇಲ್ಮನವಿದಾರಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಭಾರತಿಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.430 ರ ಅಡಿಯಲ್ಲಿ ಮಧ್ಯಂತರ ಅರ್ಜಿ-1 ಸಲ್ಲಿಸಿ, ವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪನ್ನು ತಡೆಹಿಡಿಯಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಮೇಲ್ಮನವಿದಾರರು ಆರ್ಥಿಕವಾಗಿ ಸಬಲರಾಗಿರುವುದಿಲ್ಲ, ಯಾವುದೇ ಆದಾಯದ ಮೂಲಗಳು ಇರುವುದಿಲ್ಲ, ಸದರಿ ಮೇಲ್ಮನವಿದಾರ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,

ದಾವಣಗೆರೆಯಲ್ಲಿ ಇನ್ಸಾಲ್ವನ್ಸಿ ಪ್ರಕರಣ ಸಂಖ್ಯೆ.4/2022 ದಾಖಲುಮಾಡಿರುತ್ತಾರೆ. ಸದರಿ ದಾಖಲೆ ಪರಿಶೀಲಿಸಲಾಗಿ ಮೇಲ್ಮನವಿದಾರ ಆರ್ಥಿಕವಾಗಿ ಸಬಲನಾಗಿರುವುದಿಲ್ಲ, ಆದ್ದರಿಂದ ಮಾನ್ಯ ನ್ಯಾಯಾಲಯವು ಮೇಲ್ಮನವಿದಾರನ ವಯಸ್ಸು, ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿ, ಮೇಲ್ಮನವಿದಾರ ದಂಡದ ಹಣದಲ್ಲಿ ಶೇಕಡಾ 5 ರಷ್ಟು ಠೇವಣಿ ಇಡಲು ಆದೇಶ ಮಾಡುವುದು ಸೂಕ್ತ ಅಂತಾ ನ್ಯಾಯಾಲಯಕ್ಕೆ ಕಂಡು ಬಂದಿರುವುದರಿಂದ ಈ ಕೆಳಗಿನಂತೆ –

## ಆದೇಶ

ಮೇಲ್ಮನವಿದಾರರು ಸಲ್ಲಿಸಿದ ಮಧ್ಯಂತರ ಅರ್ಜಿ–1 ನ್ನು ಈ ಕೆಳಕಂಡ ಷರತ್ತಿನ ಮೇರೆಗೆ ಪುರಸ್ಕರಿಸಲಾಯಿತು.

ಮೇಲ್ಮನವಿದಾರರು ಆದೇಶವಾದ ಅರವತ್ತು ದಿನಗಳೊಳಗಾಗಿ ವಿಚಾರಣಾ ನ್ಯಾಯಾಲಯದಲ್ಲಿ ವಿಧಿಸಿದ ದಂಡದ ಹಣ ರೂ.5,05,000/– (ಐದು ಲಕ್ಷದ ಐದು ಸಾವಿರ ರೂಪಾಯಿ ಮಾತ್ರ) ದಲ್ಲಿ ಶೇಕಡಾ 5 ರಷ್ಟು ದಂಡದ ಹಣವನ್ನು ಠೇವಣಿ ಇಡತಕ್ಕದ್ದು ಅಂತಾ ಷರತ್ತಿನ ಆಧಾರದ ಮೇಲೆ ವಿಚಾರಣಾ ನ್ಯಾಯಾಲಯವು ನೀಡಿದ ಶಿಕ್ಷೆಯನ್ನು ಅಮಾನತ್ತಿನಲ್ಲಿಡಲು ಆದೇಶ ಮಾಡಲಾಯಿತು.

ಸದರಿ ಎದುರುದಾರರಿಗೆ ನೋಟೀಸನ್ನು ಹಾಗೂ ಅದೇಶದ ಪ್ರತಿಯನ್ನು ಕಳುಹಿಸಲು

ಆದೇಶಿಸಲಾಯಿತು ಹಾಗೂ ದಂಡದ ಹಣವನ್ನು ಪಾವತಿಸಿದ ನಂತರ ವಿಚಾರಣಾ ನ್ಯಾಯಾಲಯದಿಂದ ಕಡತವನ್ನು ತರಿಸಿಕೊಳ್ಳಲು ಆದೇಶಿಸಲಾಗಿದೆ.

ಮುಂದಿನ ದಿನಾಂಕ. 09-11-2025

SD/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು , ದಾವಣಗೆರೆ.